# ಸಶಸ್ತ್ರ ಹೋರಾಟ ಅಪ್ರಜಾತಾಂತ್ರಿಕವೇ?

# ‘ಕ್ರಾಂತಿಕಾರಿ ಹಿಂಸೆ’ ಪ್ರಜಾತಾಂತ್ರಿಕವಲ್ಲವೇ?

ಬೇರೆಲ್ಲೆಡೆಯಂತೆಯೇ ಕರ್ನಾಟಕದಲ್ಲೂ ಸಾಮಾಜಿಕ ಪರಿವರ್ತನೆಯಲ್ಲಿ **ಹಿಂಸೆಯ ಪಾತ್ರವು,** ಸಮಾಜದ ಹಲವು ವಲಯಗಳಲ್ಲಿ, ಮುಖ್ಯವಾಗಿ ಬುದ್ಧಿಜೀವಿ ವಲಯದಲ್ಲಿ, ಒಂದು ಮುಖ್ಯ ಚರ್ಚೆ ಮತ್ತು ವಿವಾದಾತ್ಮಕ ವಿಷಯವಾಗಿದೆ. ಇದು ಸಮಾಜದ ವಿವಿಧ ಜನಸಮೂಹಗಳನ್ನು ಆ ಮಟ್ಟಿಗೆ ಪ್ರಭಾವಿಸಿದೆ.

ಕರ್ನಾಟಕದಲ್ಲೂ ದಮನಿತ ಜನವರ್ಗಗಳು ನಿರಂತರವಾಗಿ ಆಳುವ ವರ್ಗಗಳಿಂದ ಹಿಂಸೆಯನ್ನು ಅನುಭವಿಸುತ್ತಾ ಬಂದಿದ್ದಾರೆ. ಎಲ್ಲಿಯವರೆಗೆ ಅವರು ಅದನ್ನು ಮಾತೆತ್ತದೇ ಮೌನವಾಗಿ ಸಹಿಸಿಕೊಂಡಿದ್ದರೋ, ಹರಿದ ತಮ್ಮದೇ ರಕ್ತವನ್ನು ಕಣ್ಣೀರಿನಲ್ಲಿ ತೊಳೆದುಕೊಟ್ಟು ಸುಮ್ಮನಾಗುತ್ತಿದ್ದರೋ ಮತ್ತು ಅದರದೇ ವಿಸ್ತರಿತ ರೂಪವಾಗಿ ಕಥೆ ಕಾದಂಬರಿಗಳಲ್ಲಿ ಕರುಣಾ ರಸಕ್ಕೆ ತೃಪ್ತಿಪಟ್ಟುಕೊಳ್ಳುತ್ತಿದ್ದರೋ, ಅಲ್ಲಿಯವರೆಗೆ ಹಿಂಸೆಯು ಸಾಮಾಜಿಕ ವಲಯದಲ್ಲಿ ಗಂಭೀರ ಚರ್ಚೆಯ ವಿಷಯವಾಗೇನೂ ಮುಂದೆ ಬಂದಿಲ್ಲ.

ಆದರೆ ಈಗ ಕಾಲ ಮುಂದುವರಿದಿದೆ. ‘ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು’ ಎಂಬ ಆಳುವ ವರ್ಗ ಬಳಸುತ್ತಿದ್ದ ನಿಯಮವನ್ನು ಜನ ತಮ್ಮ ಕೈಗೆತ್ತಿಕೊಂಡಿದ್ದಾರೆ. ಅದರ ವ್ಯತ್ಯಾಸ ಇಷ್ಟೇ. ಪ್ರಭುತ್ವದ ಸೈನ್ಯವನ್ನು – ಜನತೆಯ ಸೈನ್ಯದಿಂದ, ಆಳುವ ವರ್ಗಗಳ ಪ್ರತಿಗಾಮಿ ಹಿಂಸೆಯನ್ನು–ದುಡಿವ ವರ್ಗಗಳ ಕ್ರಾಂತಿಕಾರಿ ಹಿಂಸೆಯಿಂದ ಮತ್ತು ಅಂತಿಮವಾಗಿ ಆಳುವ ವರ್ಗಗಳ ರಾಜಕೀಯ ಅಧಿಕಾರದ ಅಂಗಗಳನ್ನು–ಜನತೆಯ ರಾಜ್ಯಾಧಿಕಾರದ ಅಂಗಗಳಿಂದ ಕಿತ್ತುಹಾಕಲು ದೃಢವಾದ ಹೆಜ್ಜೆ ಇಟ್ಟಿದ್ದಾರೆ. ಕರ್ನಾಟಕದಲ್ಲಿನ ಇದರ ಅಭಿವ್ಯಕ್ತಿಯೇ ಮಲೆನಾಡಿನಲ್ಲಿ ಬೆಳೆಯುತ್ತಿರುವ ಜನತೆಯ ಕ್ರಾಂತಿಕಾರಿ ಚಳುವಳಿ. **ಇದುವರೆಗೆ ಶೋಷಣೆಗೊಳಗಾಗಿದ್ದ ಜನತೆ ಈಗ ದೃಢವಾಗಿ ಎದ್ದುನಿಂತು ಸಾಮೂಹಿಕ ಪ್ರತಿಭಟನೆಗಿಳಿಯುತ್ತಿದ್ದಾರೆ. ಅದರ ಜೊತೆಗೇ ಪ್ರತಿಭಟನೆಯ ಹಕ್ಕನ್ನು ದಮನಿಸುತ್ತಿರುವ ಊಳಿಗಮಾನ್ಯ ಶೋಷಕರು ಮತ್ತು ಪ್ರಭುತ್ವದ ಕ್ರೂರ ಪೊಲೀಸ್ ಪಡೆಗಳ ಆಟಾಟೋಪಕ್ಕೂ ಸಶಸ್ತ್ರವಾಗಿ ಪೆಟ್ಟುಕೊಡುತ್ತಿದ್ದಾರೆ.** ಇದು ಅವರ ಹಕ್ಕು ಮತ್ತು ಕರ್ತವ್ಯವೇ ಅಲ್ಲದೆ ಅವರ ಸ್ವಾಭಿಮಾನದ ಪ್ರತೀಕವೂ ಹೌದು. **ಇದನ್ನೇ ನಾವು ‘ಕ್ರಾಂತಿಕಾರಿ ಪ್ರಜಾತಾಂತ್ರಿಕ ಹಿಂಸೆ’ ಎಂದು ಕರೆಯುವುದು.**

**ಇದನ್ನು ಎಲ್ಲಾ ಶೋಷಣೆಗೊಳಗಾದ ಜನರು ಮತ್ತು ಬುದ್ಧಿಜೀವಿಗಳು, ಪತ್ರಕರ್ತರು, ವಿದ್ಯಾರ್ಥಿಗಳೆಲ್ಲರೂ ಹೃತ್ಪೂರ್ವಕವಾಗಿ, ದೃಢವಾಗಿ ಎತ್ತಿಹಿಡಿಯಬೇಕೆಂದು ವಿನಂತಿಸುತ್ತೇವೆ.**

ಜೊತೆಗೆ, **ಹಿಂಸೆಯನ್ನು** ಚಾರಿತ್ರಿಕ ಮತ್ತು ವರ್ಗ ಹಿನ್ನಲೆಯಿಂದ ಹೇಗೆ ಅರ್ಥ ಮಾಡಿಕೊಳ್ಳಬೇಕೆಂಬ ಬಗ್ಗೆ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಹುತಾತ್ಮರಾದ, ನಮ್ಮೆಲ್ಲರ ಪ್ರೀತಿಪಾತ್ರ ಕಾಮ್ರೇಡ್ ಸಾಕೇತ್ ರಾಜನ್ ಈ ಹಿಂದೆ ಬರೆದ ಅಂಶಗಳನ್ನು ಮತ್ತೊಮ್ಮೆ ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇವೆ. ಕಾ. ಸಾಕೇತ್ ರಾಜನ್ ಆಳುವವರ್ಗ ಪಡೆಗಳ ಕ್ರೂರ ಹಿಂಸೆಗೆ ಪ್ರಾಣ ತ್ಯಾಗ ಮಾಡಿದ ಕ್ರಾಂತಿಕಾರಿ ವೀರ ಎಂಬುದನ್ನು ನಾವು ನೆನಪಿಸಿಕೊಳ್ಳೋಣ.

## ಫ್ರಾನ್ಸ್‌ನಲ್ಲಿ ಪ್ರಜಾತಂತ್ರ ಹೇಗೆ ನೆಲೆಗೊಂಡಿತು?

ಪ್ರಜಾತಂತ್ರದ ರಾಜಕೀಯ ಸಿದ್ಧಾಂತವು ಯೂರೋಪಿನ ಊಳಿಗಮಾನ್ಯ ವಿರೋಧಿ ಬಂಡವಾಳಶಾಹಿ ಕ್ರಾಂತಿಯ ಭಾಗವಾಗಿ ಮೊದಲಿಗೆ ಮೊಳಗಿತು.

ಯೂರೋಪಿನ ಪ್ರಜಾತಾಂತ್ರಿಕ ಕ್ರಾಂತಿಗಳಲ್ಲಿ ಸುಪ್ರಸಿದ್ಧವಾದದ್ದು ಫ್ರಾನ್ಸ್ ದೇಶದ ಕ್ರಾಂತಿ.

ಇದು 1789ರಲ್ಲಿ ಸಂಭವಿಸಿತು. ಇದನ್ನು ಬಂಡವಾಳಶಾಹಿ ಪ್ರಜಾತಾಂತ್ರಿಕ ಕ್ರಾಂತಿಗೆ ಮಾದರಿ ಎಂದು ಪರಿಗಣಿಸಲಾಗಿದೆ. ಏಕೆಂದರೆ ಇಂಗ್ಲೆಂಡ್, ಹಾಲೆಂಡ್, ಜರ್ಮನಿ, ಆಸ್ಟ್ರಿಯ ಮುಂತಾದ ಐರೋಪ್ಯ ದೇಶಗಳ ಪ್ರಜಾತಾಂತ್ರಿಕ ಕ್ರಾಂತಿಗಳಿಗೆ ಹೋಲಿಸಿದಾಗ ಫ್ರಾನ್ಸ್‌ನಲ್ಲಿ ನಡೆದ ಬಂಡವಾಳಶಾಹಿ ಕ್ರಾಂತಿಯು ಸಮಗ್ರತೆಯನ್ನು ಹೊಂದಿತ್ತು.

ಜನ ಈ ಹೋರಾಟದಲ್ಲಿ ವ್ಯಾಪಕವಾಗಿ ಪಾಲ್ಗೊಂಡರು. ಈ ಚಳುವಳಿಯು ಊಳಿಗಮಾನ್ಯ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವಲ್ಲಿ ಅತ್ಯಂತ ರ್‍ಯಾಡಿಕಲ್ ಆದ ನಿಲುವು ತಾಳಿತು. ಇದು ಜಗತ್ತಿಗೆ ಪರಿಚಯ ಮಾಡಿಕೊಟ್ಟ ರಾಜಕೀಯ ಘೋಷಣೆಗಳಾದ “ವಿಮೋಚನೆ,

ಸಮಾನತೆ ಹಾಗೂ ಸಹೋದರತೆ'' ಇಂದಿಗೂ ವಿಶ್ವದ ಹಲವು ದೇಶಗಳ ಜನರಿಗೆ ಆದರ್ಶವಾಗಿ ಉಳಿದಿದೆ. ಅಷ್ಟೇ ಅಲ್ಲದೆ ಫ್ರಾನ್ಸ್‌ನ ಬೂರ್ಶ್ವಾ ಪ್ರಜಾತಾಂತ್ರಿಕ ಕ್ರಾಂತಿಯು ಉಳಿದೆಲ್ಲಾ ದೇಶಗಳಿಗಿಂತಲೂ ಈ ಅಭಿಲಾಷೆಗಳನ್ನು ವ್ಯಕ್ತ ಮಾಡುವ ಅತ್ಯುತ್ತಮ ಮೇಧಾವಿಗಳನ್ನು ಮತ್ತು ರಾಜಕೀಯ ಸಿದ್ಧಾಂತಿಗಳನ್ನು ಹುಟ್ಟುಹಾಕಿತು. ಹೀಗಾಗಿ ಅದು ಮಾದರಿ ಬೂರ್ಶ್ವಾ ಪ್ರಜಾತಾಂತ್ರಿಕ ಕ್ರಾಂತಿ ಆಯಿತು.

ಆದರೆ ಫ್ರಾನ್ಸ್‌ನ ಈ ಮಾದರಿ ಕ್ರಾಂತಿಯು ಉಳಿದೆಲ್ಲಾ ಬೂರ್ಶ್ವಾ ಕ್ರಾಂತಿಗಳಿಗಿಂತಲೂ ಅತ್ಯಂತ ಭೀಕರವಾದ ರಕ್ತಪಾತವನ್ನು ಕಂಡಿತು. ರಾಜನ ನಿರ್ಬಂಧದ ವಿರುದ್ಧ ಸಿಡಿದೆದ್ದ ಜನತೆ ಅಂತಿಮವಾಗಿ ರಾಜ ಮನೆತನವನ್ನು ಸಂಪೂರ್ಣವಾಗಿ ಕೊಂದುಹಾಕಿತು. ''ಕೆಂಪು ಟೋಪಿ''ಗಳೆಂದೇ ಹೆಸರುವಾಸಿಯಾದ ಹೋರಾಟಗಾರರು ಹರಿತವಾದ ಗಿಲೋಟಿನ್ ಯಂತ್ರಕ್ಕಿರಿಸಿ ಆಳುವರಸರ ಕುತ್ತಿಗೆಯನ್ನು ಪ್ಯಾರಿಸ್‌ನ ಬೀದಿಗಳಲ್ಲಿ ಕಡಿದು ಹಾಕಿದರು. ವಾಸ್ತವದಲ್ಲಿ ಅವರು ''ಕೆಂಪು ಭಯೋತ್ಪಾದನೆ'' ಸೃಷ್ಟಿಸಿದರು. ಇದರ ಮೂಲಕವೇ ಊಳಿಗಮಾನ್ಯ ವರ್ಗವನ್ನು ಅಧಿಕಾರದಿಂದ ಕಿತ್ತೊಗೆದು ಬಂಡವಾಳಶಾಹಿ ವರ್ಗವು ರಾಜ್ಯಾಧಿಕಾರವನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಇವು ಚರಿತ್ರೆಯ ಸತ್ಯಗಳು. ಆದರೆ ಈ ಕಾರಣಕ್ಕೆ ಫ್ರೆಂಚ್ ಕ್ರಾಂತಿಯು 'ಅಪ್ರಜಾತಾಂತ್ರಿಕ' ಆಯಿತೆ? ಪ್ರಜಾತಂತ್ರವನ್ನು ಪ್ರಪಂಚಕ್ಕೆ ಬೋಧಿಸಿದ ಫ್ರೆಂಚ್ ಬೂರ್ಶ್ವಾ ಕ್ರಾಂತಿಕಾರಿಗಳು ಪ್ರಜಾತಂತ್ರವನ್ನು ವಿರೋಧಿಸುವವರಾದರೆ?

ಇಲ್ಲ. ಅವರಿಗೆ ಈ ಹಣೆಪಟ್ಟಿಗಳನ್ನು ಯಾರೂ ಕಟ್ಟಲಿಲ್ಲ. ನಕ್ಸಲೀಯ ಹಿಂಸೆಯನ್ನು ವಿಮರ್ಶಿಸುವ ಕೆಲವು ಪ್ರಗತಿಪರರು ಬಹುಶಃ ಫ್ರೆಂಚ್ ಕ್ರಾಂತಿಯನ್ನು ಹೀಗೆ ತಿರಸ್ಕರಿಸಲು ಹೋಗಲಾರರು.

## ರಷ್ಯಾದಲ್ಲಿ ಕಾರ್ಮಿಕ ವರ್ಗದ ಪ್ರಜಾತಂತ್ರ

1917ರ ಫೆಬ್ರವರಿಯಲ್ಲಿ ರಷ್ಯಾದ ಬಂಡವಾಳಶಾಹಿ ಕ್ರಾಂತಿಯು ಯಶಸ್ವಿ ಆಯಿತು. ಆದರೆ ಅದು ಊಳಿಗಮಾನ್ಯ ವಿರೋಧಿ ಪ್ರಜಾತಂತ್ರದ ಹಾದಿಯಿಂದ ಮತ್ತೆ ನಿರಂಕುಶತ್ವಕ್ಕೆ ದಾರಿ ಹಿಡಿಯತೊಡಗಿತು. ಲೆನಿನ್ ನಾಯಕತ್ವದ ರಷ್ಯಾ ಕಮ್ಯೂನಿಸ್ಟ್ ಪಕ್ಷ ಎಚ್ಚೆತ್ತುಕೊಂಡ ಸಂಘಟನೆ ಆಗಿತ್ತು. ಅದರ ನಾಯಕತ್ವದಲ್ಲಿ ಅದೇ ವರ್ಷ ಅಕ್ಟೋಬರ್‌ನಲ್ಲಿ ಸಮಾಜವಾದಿ ಕ್ರಾಂತಿಯು ಯಶಸ್ವಿ ಆಯಿತು. ಹಿಂಸೆ ಬಳಸಿದ್ದರಿಂದಲೇ ಇದು ಸಾಧ್ಯವಾಯಿತು. ನಂತರ 1922ರ ತನಕ ರಷ್ಯಾದಲ್ಲಿ ರೈತ-ಕಾರ್ಮಿಕ ಕೆಂಪು ಸೈನ್ಯಕ್ಕೂ ಸಾಮ್ರಾಜ್ಯಶಾಹಿ-ಊಳಿಗಮಾನ್ಯ ಶ್ವೇತ ಸೈನ್ಯಗಳಿಗೂ ಭೀಕರ ಯುದ್ಧ ನಡೆಯಿತು. ಸಾವಿರಾರು ಜನ ಸತ್ತರು. ಅಂತಿಮವಾಗಿ ಕೆಂಪು ಸೇನೆ ಜಯ ಸಾಧಿಸಿತು. ಈ ರಕ್ತದಿಂದ ಮತ್ತಷ್ಟು ಕೆಂಪಾದ ಸುತ್ತಿಗೆ-ಕುಡುಗೋಲಿನ ಗುರುತನ್ನು ಹೊಂದಿದ ಬಾವುಟ ಪೆಟ್ರೋಗ್ರಾಡ್ ನಗರದ ಮುಗಿಲೆತ್ತರಕ್ಕೆ ಹಾರಿತು.

ರಷ್ಯಾದಲ್ಲಿ ಸಮಾಜವಾದ ಮತ್ತು ಶಾಂತಿ ನೆಲೆಗೊಳ್ಳಲು ಸಾಧ್ಯವಾಯಿತು. ಫ್ರೆಂಚ್ ಕ್ರಾಂತಿಯ ಘೋಷಣೆಗಳಾದ ವಿಮೋಚನೆ, ಸಮಾನತೆ ಹಾಗೂ ಸಹೋದರತೆಗಳನ್ನು ವಾಸ್ತವದಲ್ಲಿ ಕಾರ್ಮಿಕ ವರ್ಗವೇ ಜಾರಿಗೆ ತಂದಿತು. ರಷ್ಯಾದಲ್ಲಿ ನೆಲೆಗೊಂಡ ಉನ್ನತ ಮಟ್ಟದ ಪ್ರಜಾತಂತ್ರ - ಕಾರ್ಮಿಕ ವರ್ಗದ ಪ್ರಜಾತಂತ್ರ - ಹಿಂಸೆಯ ಬಳಕೆಯಿಂದಲೇ ಸಾಧ್ಯವಾಯಿತು.

ಈ ಕಾರಣಕ್ಕಾಗಿ ಹಿಂಸೆಯಲ್ಲಿ ತೊಡಗಿದ ರಷ್ಯಾದ ಕಮ್ಯೂನಿಸ್ಟರು ಪ್ರಜಾತಂತ್ರ ವಿರೋಧಿಗಳಾದರೇ? ಸಶಸ್ತ್ರ ಹೋರಾಟವು ಅಪ್ರಜಾತಾಂತ್ರಿಕವೆಂದು ಹೇಳಿರುವ ಬುದ್ಧಿಜೀವಿಗಳು ಬಹುಶಃ ರಷ್ಯಾದ ಬಗ್ಗೆ ಇಂಥ ಆರೋಪ ಮಾಡಲಾರರು.

## ಚೀನಾದಲ್ಲಿ ಪ್ರಜಾಯುದ್ಧದಿಂದಲೇ ಪ್ರಜಾತಂತ್ರದ ಸ್ಥಾಪನೆ

1949ರಲ್ಲಿ ಚೀನಾದಲ್ಲಿ ಊಳಿಗಮಾನ್ಯ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ನವ ಪ್ರಜಾತಾಂತ್ರಿಕ ಕ್ರಾಂತಿ ಯಶಸ್ವಿ ಆಯಿತು. ಇದು ಸುಮಾರು ಎರಡೂವರೆ ದಶಕಗಳ ಕಾಲದ ಸುದೀರ್ಘ ಸಶಸ್ತ್ರ ಹೋರಾಟದ ಫಲವಾಗಿ ಆಯಿತು. ಆ ನಂತರವೇ ಅಲ್ಲಿಯ ರೈತ ಕಾರ್ಮಿಕರಿಂದ ಅಧಿಕಾರ ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಚೀನಾ ಕ್ರಾಂತಿಯ ಪ್ರಕ್ರಿಯೆಯಲ್ಲಿ 2.5 ಕೋಟಿ ಜನ ಮೃತಪಟ್ಟರು. ಸ್ಥಳೀಯ ದೊಡ್ಡ ಭೂಮಾಲೀಕ ಹಾಗೂ ದಲ್ಲಾಳಿ ಆಳುವ ವರ್ಗಗಳ ಮತ್ತು ಸಾಮ್ರಾಜ್ಯಶಾಹಿ ಸೈನ್ಯಗಳೇ ಬಹುಪಾಲು ಸಾವುಗಳಿಗೆ ಕಾರಣವಾದವು. ಸಶಸ್ತ್ರ ಹೋರಾಟದ ಫಲವಾಗಿ ದಮನ ದೌರ್ಜನ್ಯಗಳಿಂದ ತುಂಬಿ ಹೋಗಿದ್ದ ಹಳೇ ಚೀನ, ಪ್ರಜಾತಂತ್ರದ ಬೀಡಾದ ನವ ಚೀನಾ ಆಗಿ ಮಾರ್ಪಡಲಿಲ್ಲವೇ?

ಚೀನದಲ್ಲಿ ಕ್ರಾಂತಿಕಾರಿಗಳು ನೂತನ ಪ್ರಜಾತಂತ್ರವನ್ನು ನೆಲೆಗೊಳಿಸಲು ಹಿಂಸೆಯಲ್ಲಿ ತೊಡಗಿದ್ದರಿಂದ ಚೀನ ಕಮ್ಯೂನಿಸ್ಟ್ ಪಕ್ಷ ಉನ್ನತ ಮಟ್ಟದ ಪ್ರಜಾತಾಂತ್ರಿಕ ಸಂಘಟನೆಯಾಗಿ ಅಸ್ತಿತ್ವ ಪಡೆದುಕೊಳ್ಳಲು ಅದು ತೊಡಕಾಗಲಿಲ್ಲ. ಚೀನಾದ ಪ್ರಜಾಯುದ್ಧವು ಅತ್ಯಂತ

ದೃಢವಾಗಿ ಮತ್ತು ಅಚಲವಾಗಿ ಪ್ರಜಾತಂತ್ರವನ್ನು ಜಾರಿಗೆ ತರಲು ಮತ್ತು ಆ ಮೂಲಕ ಚೀನಾದ ದುಡಿಯುವ ಜನರಿಗೆ ತಮ್ಮನ್ನು ತಾವೇ ಆಳಿಕೊಳ್ಳುವ ಅವಕಾಶ ಕಲ್ಪಿಸಿಕೊಟ್ಟಿತು.

## ಪ್ರಜಾತಂತ್ರದ ಸಾಮಾಜಿಕ ಅನುಭವ

ಬಂಡವಾಳಶಾಹಿ ಯುಗದಲ್ಲಿ ಅಥವಾ ಕಾರ್ಮಿಕ ವರ್ಗದ ಕ್ರಾಂತಿಯ ಯುಗದಲ್ಲಿ ಪ್ರಜಾತಂತ್ರವನ್ನು ಸ್ಥಾಪಿಸಲು ಸಶಸ್ತ್ರ ಹೋರಾಟ ಏಕೈಕ ಮಾರ್ಗವಾಗಿರುವುದು ಸಮಾಜದ ಅನುಭವದಿಂದ ರುಜು ಆಗಿರುವ ಸತ್ಯವಾಗಿದೆ.

ಊಳಿಗಮಾನ್ಯ ನಿರಂಕುಶತ್ವವನ್ನು ಬಗ್ಗುಬಡಿದು ಪ್ರಜಾತಂತ್ರವನ್ನು ನೆಲೆಗೊಳಿಸಲು ಸಶಸ್ತ್ರ ಹೋರಾಟ ಮಾರ್ಗವಾಗಿದೆ. ಪ್ರಜಾತಂತ್ರವೆಂಬ ಕೂಸಿನ ಹುಟ್ಟಿಗೆ ಸಶಸ್ತ್ರ ಸಂಗ್ರಾಮವೇ ದಾದಿಯಾಗಿದೆ.

ಸಶಸ್ತ್ರ ಹೋರಾಟದಲ್ಲಿ ನಂಬಿಕೆ ಇಟ್ಟ ಕಾರಣಕ್ಕೆ ಇಂತಹವರು ಪ್ರಜಾತಂತ್ರದಲ್ಲಿ ನಂಬಿಕೆ ಕಳೆದುಕೊಂಡವರೆಂದು ಹೇಳಿದಾಗ ಅದು ಪ್ರಜಾತಂತ್ರ ಹಾದು ಬಂದ ಚರಿತ್ರೆಯ ನಿರಾಕರಣೆ ಆಗುತ್ತದೆ.

## ಹಾಗಾದರೆ, ಬಂಡವಾಳಶಾಹಿ ಪ್ರಜಾತಂತ್ರ ಎಂದರೆ ಏನು?

ಮೊದಲನೆಯದಾಗಿ, ಬೃಹತ್ ಆಸ್ತಿವಂತ ವರ್ಗಗಳು ಮುಕ್ತತೆಯ ಹೆಸರಿನಲ್ಲಿ ದುಡಿಯುವ ಜನವರ್ಗಗಳನ್ನು ಮೈಯಲ್ಲಿ ಕಸುವಿಲ್ಲದಂತೆ ದುಡಿಸಿ, ಬಸಿದು ತಾನು ಆಸ್ತಿ ಶೇಖರಿಸುವ ಸ್ವಾತಂತ್ರ್ಯ ಹೊಂದಿದ 'ಪ್ರಜಾ'ತಂತ್ರ. ಎರಡನೆಯದಾಗಿ, ಇದೊಂದು ಔಪಚಾರಿಕ ಪ್ರಜಾತಂತ್ರ. ಅಂದರೆ ಪ್ರಜಾತಂತ್ರದ ಮೋಸ ಮಾಡುವ ಮುಸುಕಿನಡಿಯಲ್ಲಿ ಅಡಗಿದ ಬೃಹತ್ ಆಸ್ತಿವಂತ ವರ್ಗಗಳ ಸರ್ವಾಧಿಕಾರ. ಈ ಬೃಹತ್ ಆಸ್ತಿಯನ್ನು ಕಾಪಾಡಿಕೊಳ್ಳಲು ಸರ್ವವ್ಯಾಪಿಯಾಗಿ ಅಧಿಕಾರವನ್ನು ಆವರಿಸಿಕೊಂಡಿರುವ, ಮೋಸ ಮಾಡುವ ಪದಜಾಲಗಳ ಒಂದು ಪಳಗಿದ ರಾಜಕೀಯ ವ್ಯವಸ್ಥೆ.

## ನಿಜವಾದ ಪ್ರಜಾತಂತ್ರ ಎಂದರೆ ಏನು?

ಮೊದಲನೆಯದಾಗಿ, ಬೃಹತ್ ಖಾಸಗಿ ಆಸ್ತಿ ಹೊಂದಿ, ಜನರನ್ನು ಶೋಷಿಸುವ ಶೋಷಕ ವರ್ಗವನ್ನು ಮಟ್ಟ ಹಾಕುವುದು. ಶೋಷಣೆಯ ಬೇರುಗಳು ಹುದುಗಿರುವ ಆರ್ಥಿಕ ಅಸಮಾನತೆಯನ್ನು ತೊಲಗಿಸುವುದು ಮತ್ತು ಅದಕ್ಕಾಗಿ ಇವೆಲ್ಲದರ ಪ್ರಾತಿನಿಧಿಕ-ಶಕ್ತಿಕೇಂದ್ರವಾದ ಅವರ ರಾಜಕೀಯಾಧಿಕಾರವನ್ನೇ ವಶಪಡಿಸಿಕೊಳ್ಳುವುದು. ಈ ಬಲವಂತದ - ಹಿಂಸಾತ್ಮಕವಾದ, ಆದರೆ ಅನಿವಾರ್ಯವಾದ ಕೆಲಸವು, ಜನತೆಯ ಪ್ರಜಾತಂತ್ರದ ಸ್ಥಾಪನೆಯ ಮೊದಲ ಹೆಜ್ಜೆ.

ಎರಡನೆಯದಾಗಿ, ಕೆಡವಿದ ಆ ಜಾಗದಲ್ಲಿ ತಡಮಾಡದೆ ಜನತೆಯದೇ ಆದ, ಖಾಸಗೀ ಆಸ್ತಿಗಳಿಲ್ಲದ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಪ್ರಭುತ್ವವನ್ನು ಸ್ಥಾಪಿಸುವುದು. ಶೋಷಣೆಯ ವಿರುದ್ಧದ ಹೋರಾಟದಲ್ಲಿ ಪ್ರಭುತ್ವವೇ ಜನರನ್ನು ತೊಡಗಿಸುವುದು ಮತ್ತು ಅದರೊಂದಿಗೆ ನಿಂತು ನಾಯಕತ್ವ ವಹಿಸುವುದು ಮತ್ತು ಖಾಸಗೀ ಆಸ್ತಿಗಳಿಲ್ಲದ ಸಮಾಜದೆಡೆಗೆ ಸಾಗುವುದು.

ಹೀಗೆ ನಿಜವಾದ ಪ್ರಜಾತಂತ್ರವನ್ನು ನಾವು ಸ್ಥಾಪಿಸಬೇಕು.

ಸಶಸ್ತ್ರ ಹೋರಾಟ ಒಂದು ಮುಖ್ಯ ಹೋರಾಟ ವಿಧಾನವಾಗಿದೆ. ಕ್ರಾಂತಿಕಾರಿ ಚಳುವಳಿಯಲ್ಲಿ ಸಶಸ್ತ್ರ ಹೋರಾಟವನ್ನು ಪ್ರಧಾನವಾಗಿ ಬಳಸಿದಾಗ ಮಾತ್ರ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆ ಸಾಧ್ಯ.

## ಸಶಸ್ತ್ರ ಹೋರಾಟದ ರಾಜಕೀಯ ಉದ್ದೇಶವೇ ನಿರ್ಣಾಯಕವಾದುದು

ಸಶಸ್ತ್ರ ಹೋರಾಟವೊಂದು ಏನನ್ನು ಬಯಸುತ್ತದೆ ಎಂಬುದನ್ನು ಪರಿಗಣಿಸದೇ ಕೇವಲ ಅದರ ರೂಪವನ್ನು ಅಷ್ಟೆ ಪರಿಗಣಿಸಿ ತೀರ್ಮಾನಕ್ಕೆ ಬರುವುದು ಅಪ್ರಬುದ್ಧ ನಿಲುವು ಆಗುತ್ತದೆ. ಇದು ಸಾಮಾಜಿಕ ಚಳುವಳಿಗಳ ಬಗ್ಗೆ ಗಾಂಧಿವಾದದ ಮತ್ತು ಆಳುವ ವರ್ಗಗಳ ಪ್ರಚಾರದಿಂದ ಉಂಟಾಗಿರುವ ತಪ್ಪು ಪರಿಕಲ್ಪನೆ ಆಗಿದೆ.

ಸಶಸ್ತ್ರ ಹೋರಾಟವು ಸಮಾಜದಲ್ಲಿ ಯಾರನ್ನು ಗುರಿ ಮಾಡಲು ಹೊರಟಿದೆ ಎಂಬುದು ನಿರ್ಣಾಯಕ ವಿಷಯವಾಗಿರುತ್ತದೆ. ಅದು ದೊಡ್ಡ ಭೂಮಾಲೀಕರ, ದಲ್ಲಾಳಿ ಬಂಡವಾಳಿಗರ ಮತ್ತು ಅವರು ಸೇವೆ ಮಾಡುವ ಸಾಮ್ರಾಜ್ಯಶಾಹಿಗೆ ಗುರಿ ಮಾಡುವುದಾದರೆ ಅದು

ಪ್ರಗತಿಪರ ಮತ್ತು ಪ್ರಜಾತಾಂತ್ರಿಕವಾಗುತ್ತದೆ. ಏಕೆಂದರೆ ಈ ವರ್ಗಗಳ ನಿರ್ಮೂಲನೆಯಿಂದಲೇ ಸಮಾಜದಲ್ಲಿ ನಿಜವಾದ ಪ್ರಜಾತಂತ್ರ ಅರಳಲು ಸಾಧ್ಯವಾಗುತ್ತದೆ.

ನಕ್ಸಲೀಯರ ಹಿಂಸೆ ಈ ವರ್ಗಗಳನ್ನು ಮತ್ತು ಇವನ್ನು ಪ್ರತಿನಿದಿಸುವ ಪ್ರಭುತ್ವವನ್ನು ಗುರಿ ಮಾಡಿದೆ.

ಇದಕ್ಕೆ ತದ್ವಿರುದ್ಧವಾಗಿ ರೈತರನ್ನು, ಕಾರ್ಮಿಕರನ್ನು, ದುಡಿಯುವ ಜನರನ್ನು ಮತ್ತವರನ್ನು ಪ್ರತಿನಿಧಿಸುವ ನಕ್ಸಲೀಯರನ್ನು ಸಾಮಾಜಿಕ ಹಿಂಸೆಗೆ ಗುರಿ ಮಾಡುವುದಾದರೆ ಅದು ಅಪ್ರಜಾತಾಂತ್ರಿಕವಾಗುತ್ತದೆ. ದೇಶದ ಪೊಲೀಸ್, ಮಿಲಿಟರಿ ಸಂಸ್ಥೆಗಳು ಜನರನ್ನು ಗುರಿ ಮಾಡುವುದರಿಂದ ಅದನ್ನು ಪ್ರಜಾತಂತ್ರ ವಿರೋಧಿ ಎಂದು ಗುರುತಿಸಬೇಕಿದೆ. ಈ ಕಾರಣಕ್ಕೆ ಆರ್.ಎಸ್.ಎಸ್, ಭಜರಂಗದಳಗಳ ಹಿಂಸೆಯನ್ನು ಪ್ರತಿಗಾಮಿ ಹಿಂಸೆ ಎಂದು ಗುರುತಿಸಬೇಕಿದೆ. ಇಲ್ಲವಾದರೆ ಜನಪರವಾದ ಪ್ರಜಾತಂತ್ರವಾದಿ ನಕ್ಸಲೀಯರನ್ನು ಮತ್ತು ಜನ ವಿರೋಧಿಯಾದ ಅಪ್ರಜಾತಾಂತ್ರಿಕ ಪ್ರಭುತ್ವವನ್ನು ಒಂದೇ ತಕ್ಕಡಿಯಲ್ಲಿ ಇಟ್ಟು ತೂಗಿದಂತೆ ಆಗುತ್ತದೆ. ಅಂತಿಮವಾಗಿ ಪ್ರಜಾತಂತ್ರದ ಬಗ್ಗೆ ಗೊಂದಲವನ್ನು ಮತ್ತು ಶಸ್ತ್ರಾಸ್ತ್ರೇತರ ಪ್ರಜಾತಾಂತ್ರಿಕ ಚಳುವಳಿಯ ದಿಕ್ಕು ಹಾಗೂ ಕಾಳಜಿಗಳನ್ನು ಕಲಸುಮೇಲೋಗರ ಮಾಡಿದಂತಾಗುತ್ತದೆ.

## ನಕ್ಸಲೀಯರು ಪ್ರಜಾತಂತ್ರ ಪ್ರೇಮಿಗಳು

ನಕ್ಸಲೀಯರು ಪ್ರಜಾತಂತ್ರ ಪ್ರೇಮಿಗಳು. ಕಾ. ಪಾರ್ವತಿ ಹಾಗೂ ಕಾ. ಹಾಜಿಮಾ ಮತ್ತು ನೂರಾರು ಹುತಾತ್ಮರು ನಕ್ಸಲೀಯರು. ಅವರು ಮಾವೋವಾದಿಗಳು. ಭಾರತದಲ್ಲಿ ಜನರಿಗೆ ಪ್ರಜಾತಂತ್ರವಿಲ್ಲ, ಅದು ಕೇವಲ ದೊಡ್ಡ ಬಂಡವಾಳಶಾಹಿಗಳಿಗೆ ಮತ್ತು ದೊಡ್ಡ ಭೂಮಾಲೀಕರಿಗೆ ಇದೆ. ದುಡಿಯುವ ಕಾರ್ಮಿಕರಿಗೆ ಅಥವಾ ರೈತರಿಗೆ ಅಥವಾ ಉದ್ಯೋಗಸ್ತರಿಗೆ ಅದು ಇನ್ನೂ ದಕ್ಕಿಲ್ಲವೆಂಬುದು ನಮ್ಮೆಲ್ಲರ ರಾಜಕೀಯ ನಂಬಿಕೆ.

ಜನರು ಪ್ರಜಾತಾಂತ್ರಿಕವಾದ 'ಅಹಿಂಸಾತ್ಮಕ' ಚಳುವಳಿಯನ್ನು ನಡೆಸಿದ್ದಾರೆ. ಕುದುರೆಮುಖದ ಅರಣ್ಯ ಪ್ರದೇಶದಲ್ಲಿ ಇದು ನಡೆಯಿತು. ರಾಯಚೂರಿನ ಹಳ್ಳಿಗಳಲ್ಲಿ ಇದು ನಡೆಯಿತು. ಆದರೆ ಪ್ರಭುತ್ವ ಜನರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ಬದಲಿಗೆ ಹೋರಾಡಿದವರನ್ನು ನಿರಂಕುಶವಾಗಿ ಹತ್ತಿಕ್ಕಿತು. ಕೇಸ್ ಹಾಕಿದರು, ಹೊಡೆದರು, ಚಿತ್ರಹಿಂಸೆ ನೀಡಿದರು, ಸುಳ್ಳು ಎನ್‌ಕೌಂಟರ್‌ಗಳಲ್ಲಿ ಕೊಂದರು.

ಆಯುಧವಿಲ್ಲದೆ, ಈ ದುಷ್ಟ ಪ್ರಭುತ್ವವನ್ನು ಪ್ರಜಾಕ್ರಾಂತಿಯ ಮೂಲಕ ಅಧಿಕಾರದಿಂದ ಕಿತ್ತೊಗೆಯದೆ ನಿಜವಾದ ಪ್ರಜಾತಂತ್ರವು ನಮ್ಮಲ್ಲಿ ನೆಲೆಗೊಳ್ಳುವುದಿಲ್ಲ. ಹೀಗಾಗಿ ದೇಶದಲ್ಲಿ ನೂತನ ಪ್ರಜಾತಂತ್ರಕ್ಕಾಗಿ, ನಮ್ಮ ನಾಡನ್ನು ನಿಜವಾದ ಪ್ರಜಾತಾಂತ್ರಿಕ ಸಮಾಜವಾಗಿ ಮಾರ್ಪಡಿಸಲು ದೇಶದ ಹಲವೆಡೆ ವಿಸ್ತರಿಸುತ್ತಿರುವ ಕ್ರಾಂತಿಕಾರಿ ಸಶಸ್ತ್ರ ಹೋರಾಟದ ಧಾರೆಯಲ್ಲಿ ಸೇರಬೇಕಾಗಿದೆ.

ಇವರು 'ಪ್ರಜಾತಂತ್ರದಲ್ಲಿ ನಂಬಿಕೆ ಕಳೆದುಕೊಂಡವರು' ಎಂದು ಹೇಳುವುದು ಸರಿ ಅಲ್ಲ. ಹೀಗೆ ಹೇಳಿದಾಗ ಅದು ಅಂತಿಮವಾಗಿ ಪ್ರಜಾತಂತ್ರ ವಿರೋಧಿ ಭಾರತೀಯ ಆಳುವ ವರ್ಗಗಳಿಗೆ ನಕ್ಸಲೀಯರನ್ನು ಕೊಲ್ಲುವ ಸರ್ಕಾರಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

ನಮಗೆ ಪ್ರಜಾತಂತ್ರದಲ್ಲಿ ಆಳವಾದ ನಂಬಿಕೆ ಇದ್ದುದರಿಂದಲೇ ಸಶಸ್ತ್ರ ಹೋರಾಟದ ಮಾರ್ಗವನ್ನು ಆರಿಸಿಕೊಂಡೆವು. ಹುತಾತ್ಮರ ಆಶಯಗಳನ್ನು ಈಡೇರಿಸುವ ದೃಢತೆ ಮತ್ತು ನೂತನ ಪ್ರಜಾತಾಂತ್ರಿಕ ಕ್ರಾಂತಿಯನ್ನು ಯಶಸ್ವಿಗೊಳಿಸುವ ಬದ್ಧತೆಯಿಂದ ಜನತೆಯ ಪಿಎಲ್‌ಜಿಎ ಸಶಸ್ತ್ರ ದಳಗಳು ಶತೃವಿನ ಮೇಲೆ ದಾಳಿಗಳನ್ನೆಸಗುತ್ತಾರೆ. ಇದು ಬರೀ ನಾಶದ ವಿಚಾರ ಅಲ್ಲ. ಜನತೆಯ ಪ್ರಜಾತಂತ್ರದ ನಿರ್ಮಾಣದ ವಿಷಯವೂ ಹೌದು ಎಂಬುದನ್ನು ಮತ್ತೊಮ್ಮೆ ತಮ್ಮೆಲ್ಲರಿಗೂ ನಾವು ನೆನಪಿಸ ಬಯಸುತ್ತೇವೆ. ಅದೇ ರೀತಿ ಮಾವೋವಾದಿ ಪಕ್ಷವೆಂದರೆ ಬರೀ ಸ್ಕ್ವಾಡುಗಳು ಮಾತ್ರವಲ್ಲ. ಇದು ಒಂದು ಮುಖ್ಯ ಜನಸಂಘಟನಾ ರೂಪವಾಗಿದ್ದು, ಜೊತೆಗೆ ಎಲ್ಲಾ ರೀತಿಯ ಸಾಮೂಹಿಕ - ಕಾನೂನುಬದ್ಧ - ಸಮರಶೀಲ ಜನ ಚಳುವಳಿಯನ್ನು ಮೇಲಿನ ಉದ್ದೇಶಕ್ಕಾಗಿ ಕಟ್ಟುತ್ತಿರುವ ಪಕ್ಷ ಎಂಬುದನ್ನು ಮತ್ತು ಅದರಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಆಳುವ ವರ್ಗಗಳಿಂದ ಶೋಷಣೆಗೊಳಗಾದ **ತಮ್ಮೆಲ್ಲರ ಪಾತ್ರವೂ ಇದೆ** ಎಂಬುದನ್ನು ಮತ್ತೊಮ್ಮೆ ತಮ್ಮೆಲ್ಲರಿಗೆ ನೆನಪು ಮಾಡಿಕೊಡುತ್ತೇವೆ ಹಾಗೂ ತಾವೆಲ್ಲರೂ ಮುಖ್ಯ ಮತ್ತು ತುರ್ತಿನ ಈ ಕೆಲಸದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಭಾಗಿಗಳಾಗಬೇಕೆಂದು ಕಳಕಳಿಯಿಂದ ವಿನಂತಿಸುತ್ತೇವೆ.

**ದೃಕ್ಪಥ ಪ್ರದೇಶ**

**6 ಸೆಪ್ಟೆಂಬರ್, 2008** **ಸಿಪಿಐ (ಮಾವೋವಾದಿ)**

**ಕರ್ನಾಟಕ**